# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೃಷಿ ಇಲಾಖೆಯ ಹಂಗಾಮು ಆಧಾರಿತ ಯೋಜನೆಗಳಿಗೆ ಪೂರ್ಣ ಪ್ರಮಾಣದ ಅನುದಾನವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1. ದಿನಾಂಕ 24-10-2013ರಂದು ನಡೆದ ಸಭೆಯ ನಡಾವಳಿ.
2.ಸರ್ಕಾರದ ಆದೇಶ ಸಂ:ಕೃಇ/48/ಕೃಯೋಕಾ/2014, ದಿ: 09-05-2014.

## ಪ್ರಸ್ತಾವನೆ:

ಕರ್ನಾಟಕ ಕೃಷಿ ಪ್ರಧಾನವಾದ ರಾಜ್ಯವಾಗಿದ್ದು, ರಾಜ್ಯ ಸರ್ಕಾರ ಕೃಷಿ ಕ್ಷೇತ್ರವನ್ನು ಸಮಗ್ರವಾಗಿ ಬಲಪಡಿಸಲು ರೈತರಿಗೆ ಅಗತ್ಯವಾದ ಕೃಷಿ ಪರಿಕರಗಳಾದ ಬಿತ್ತನೆ ಬೀಜ, ರಸಗೊಬ್ಬರ, ಲಘು ಪೋಷಕಾಂಶ, ನೀರು ಮತ್ತು ಮಣ್ಣು ಸಂರಕ್ಷಣೆ, ರೈತರಿಗೆ ಅಗತ್ಯ ಕೃಷಿ ಮಾಹಿತಿ ಮತ್ತು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸಿಕೊಡಲು ಕೃಷಿ ಇಲಾಖೆ ಸಮಗ್ರ ಕಾರ್ಯಕ್ರಮಗಳನ್ನು 2014-15ನೇ ಸಾಲಿನ ಆಯವ್ಯಯದಲ್ಲಿ ರೂಪಿಸಿದೆ. ರಾಜ್ಯದಲ್ಲಿ ಶೇ.70 ಭಾಗ ಖುಷ್ಕಿ ಪ್ರದೇಶವಿದ್ದು, ಈ ಪ್ರದೇಶಗಳು ಹವಾಮಾನ ವೈಪರೀತ್ಯಗಳಿಂದ ಕೂಡಿರುತ್ತದೆ. 2014-15ನೇ ಸಾಲಿಗೆ ರಾಜ್ಯದಲ್ಲಿ 135 ಲಕ್ಷ ಟನ್ ಆಹಾರ ಉತ್ಪಾದನೆ ಪಡೆಯಲು ಸಮಗ್ರಾಭಿವೃದ್ಧಿ ರೀತಿಯಲ್ಲಿ ಕೃಷಿ ಇಲಾಖೆ ಆಯವ್ಯಯ ರೂಪಿಸಿದೆ. ಮುಂಗಾರು ಹಂಗಾಮಿನಲ್ಲಿ ಕೃಷಿ ಬೆಳೆಗಳ ಬಿತ್ತನೆ ಪ್ರಗತಿ ಸಾಮಾನ್ಯ ಕ್ಷೇತ್ರ 70.26 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆಗೆ ಈ ಕೆಳಕಂಡ ಅಂಶಗಳಿಗನುಗುಣವಾಗಿ ಪೂರ್ಣ ಅನುದಾನದ ಅವಶ್ಯಕತೆ ಇರುತ್ತದೆ

- ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಲು ಹಾಗೂ ಹಿಂಗಾರು/ ಬೇಸಿಗೆ ಹಂಗಾಮಿನಲ್ಲಿ ಅವಶ್ಯಕ ಬಿತ್ತನೆ ಬೀಜಗಳ ಬೇಡಿಕೆಯನುಸಾರ ಒದಗಿಸಿಕೊಳ್ಳಲು .
- ರಸಗೊಬ್ಬರಗಳ ಸಮರ್ಪಕ ವಿತರಣೆಗೆ- ಹಾಗೂ ರಸಗೊಬ್ಬರ ಕಾಪು ದಾಸ್ತಾನು ಲಭ್ಯತೆಪಡಿಸಿಕೊಳ್ಳಲು
- ಬೆಳೆ ವಿಮಾ ಯೋಜನೆಗಳಡಿ ರೈತರಿಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು.
- ಭೂಚೇತನ-2 ಯೋಜನೆಯನ್ನು ರೈತರ ಕ್ಷೇತ್ರದಲ್ಲಿ ಅಳವಡಿಸಿ ಲಘುಪೋಷಕಾಂಶ ಮತ್ತು ರೈತ ಕ್ಷೇತ್ರ ಪಾಠಶಾಲೆಗಳನ್ನು ಆಯೋಜಿಸಲು
- ಸಕಾಲದಲ್ಲಿ ಕೃಷಿ ಚಟುವಟಿಕೆ ಕೈಗೊಳ್ಳಲು ಕೃಷಿ ಯಾಂತ್ರೀಕರಣಕ್ಕೆ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಆದ್ಯತೆ ನೀಡಲು
- ನೀರಿನ ಸದ್ಬಳಕೆಗೆ ಹನಿ ಮತ್ತು ತುಂತುರು ನೀರಾವರಿಗೆ ಹೆಚ್ಚಿನ ಒತ್ತು ನೀಡಿ ಹನಿ ಮತ್ತು ತುಂತುರು ನೀರಾವರಿ ಘಟಕಗಳ ವಿತರಣೆ ಮಾಡಲು.
- ಕೃಷಿ ಬೆಳೆಗಳ ಪ್ರತಿಫಲದ ಬೆಲೆಗಳನ್ನು ನಿಗದಿಪಡಿಸಲು ರಾಜ್ಯ ಮಟ್ಟದಲ್ಲಿ ರಚಿಸಲಾಗಿರುವ ಕೃಷಿ ಬೆಲೆ ಆಯೋಗವನ್ನು ಕಾರ್ಯೋನ್ಮುಖಗೊಳಿಸಲು.

ಮೇಲೆ ಓದಲಾದ ಉಲ್ಲೇಖ (1) ರ ದಿನಾಂಕ 24-10-2013ರಂದು ನಡೆದ ಸಭೆಯ ನಡಾವಳಿಯ ಪ್ರಕಾರ ಕೃಷಿ ಇಲಾಖೆಯು ಈ ಹಿಂದೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿದ್ದ ಯೋಜನೆಗಳಲ್ಲಿ ಹಂಗಾಮು ಆಧಾರಿತ ಯೋಜನೆಗಳನ್ನು ಪಟ್ಟಿಮಾಡಿ ಸದರಿ ಯೋಜನೆಗಳಡಿ ಪರಿಕರಗಳನ್ನು ಹಂಗಾಮಿನ ಪ್ರಾರಂಭದಲ್ಲಿಯೇ ರೈತರಿಗೆ ವಿತರಿಸಬೇಕಾಗಿರುವುದರಿಂದ ಸದರಿ ಯೋಜನೆಗಳಿಗೆ ಅವಶ್ಯವಾದ ಅನುದಾನವನ್ನು ಎರಡು ಕಂತುಗಳನ್ನು ಒಂದೇ ಕಂತಿನಲ್ಲಿ ಬಿಡುಗಡೆಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ತೀರ್ಮಾನಿಸಿದೆ.

..2..

ಹಂಗಾಮು ಆಧಾರಿತ ಯೋಜನೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಯೋಜನೆ ವಿವರ ಹಾಗೂ ಲೆಕ್ಕ ಶೀರ್ಷಿಕೆ | 2014-15ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನ (ರೂ ಲಕ್ಷಗಳಲ್ಲಿ) |
|---|---|---|
| 1. | ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ (2401-00-103-0-15) | 55392.41 |
| 2. | ಬೇಸಾಯ ಸಂಬಂಧಿತ ಚಟುವಟಿಕೆಗಳು (2401-00-109-0-21 ) | 9270.00 |
| 3. | ವಿಸ್ತೃತ ನೀರಾವರಿ ಕಾರ್ಯಕ್ರಮ (2401-00-108-1-15) | 10000.00 |

ಮೇಲೆ ಓದಲಾದ (2)ರ ಆದೇಶದಲ್ಲಿ ಕೃಷಿ ಇಲಾಖೆಯಲ್ಲಿ ಮುಂದುವರೆಸಲಾದ ಚಾಲ್ತಿಯೋಜನೆಗಳ ರಾಜ್ಯವಲಯ ಯೋಜನೆಗಳಿಗೆ ಮೊದಲನೇ ತ್ರೈಮಾಸಿಕ ಅನುದಾನ ಬಿಡುಗಡೆ ಮಾಡಿದೆ.

ಮೇಲ್ಕಂಡ ಪ್ರಸ್ತಾವನೆಯ ಮೇರೆಗೆ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/54/ಕೃಯೋಕಾ/2014, ಬೆಂಗಳೂರು, ದಿ: 21-07-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಲ್ಲಿ ಹಂಗಾಮು ಆಧಾರಿತ ಯೋಜನೆಗಳನ್ನು ಪಟ್ಟಿಮಾಡಿ ಸದರಿ ಯೋಜನೆಗಳಡಿ ಪರಿಕರಗಳನ್ನು ಹಂಗಾಮಿನ ಪ್ರಾರಂಭದಲ್ಲಿಯೇ ರೈತರಿಗೆ ವಿತರಿಸಬೇಕಾಗಿರುವುದರಿಂದ ಸದರಿ ಯೋಜನೆಗಳಿಗೆ ಅವಶ್ಯವಾದ ಅನುದಾನವನ್ನು ಈ ಕೆಳಕಂಡಂತೆ ಬಿಡುಗಡೆಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿ ಆದೇಶಿಸಿದೆ.

(ರೂ ಲಕ್ಷಗಳಲ್ಲಿ)

| ಯೋಜನೆ ಹೆಸರು /ಲೆಕ್ಕ ಶೀರ್ಷಿಕೆ | 2014-15ನೇ ಸಾಲಿಗೆ ಆಯವ್ಯಯ ಗುರಿ | 2 ಕಂತುಗಳಲ್ಲಿ ಬಿಡುಗಡೆ ಮಾಡಬಹುದಾದ ಅನುದಾನ | Vote on Account limit (1/3rd) | Vote on Account ಮಿತಿ ದಾಟಿರುವ ಅನುದಾನದ ಮೊತ್ತ | ಮೊದಲನೇ ಕಂತಿನಲ್ಲಿ ಈಗಾಗಲೇ ಬಿಡುಗಡೆ ಮಾಡಲಾಗಿರುವ ಅನುದಾನ | Vote on Account limit ಪ್ರಕಾರ ಬಿಡುಗಡೆಗೊಳಿಸಿದ ಉಳಿಕೆ ಮೊತ್ತ |
|---|---|---|---|---|---|---|
| 1 | 2 | 3 | 4 (ಕಾಲಂ2 / ಕಾಲಂ3) | 5 (ಕಾಲಂ3 - ಕಾಲಂ 4) | 6 | 7 (ಕಾಲಂ 4 - ಕಾಲಂ 6) |
| ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ (2401-00-103-0-15) | 55392.41 | 27696.20 | 18464.14 | 9232.06 | 13848.10 | 4616.04 |
| ಬೇಸಾಯ ಸಂಬಂಧಿತ ಚಟುವಟಿಕೆಗಳು (2401-00-109-0-21 ) | 9270.00 | 4635.00 | 3090.00 | 1545.00 | 2317.50 | 772.50 |
| ವಿಸ್ತೃತ ನೀರಾವರಿ ಕಾರ್ಯಕ್ರಮ (2401-00-108-1-15) | 10000.00 | 5000.00 | 3333.33 | 1666.67 | 2500.00 | 833.33 |
| ಒಟ್ಟು | 74662.41 | 37331.2 | 24887.47 | 12443.73 | 18665.6 | 6221.87 |

..3..

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD/211/Exp-4/2014, ದಿ: 26-05-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜ್ಯೋತಿ.ಆರ್.ಜೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (ಂ&ಇ), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
8. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ-1 ಮತ್ತು 2 ರವರ ಆಪ್ತ ಸಹಾಯಕರು, ಕೃಷಿ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
12. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.